**ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ**

**ಮೂಡಬಿದಿರೆ**

**ಸಿಸಿ ನಂ. 1755/2021, ಚಾಸಾ-02 , ಫ್ರಾಸಾ -2**

| | |
|---|---|
| ಹೆಸರು | ಪ್ರಕಾಶ ಸಾಲಿಯಾನ್ |
| ತಂದೆಯ ಹೆಸರು | ತಮ್ಮಯ್ಯ ಪೂಜಾರಿ |
| ವಯಸ್ಸು | 46 ವರ್ಷ |
| ಕೆಲಸ | ಮೆಸ್ಕಾಂನಲ್ಲಿ ಲೈನ್ ಮ್ಯಾನ್ . |
| ವಾಸ | ಶಿರ್ತಾಡಿ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 05-07-2023 |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-1 ರವರು ಹಾಗೂ ಆರೋಪಿತರು ನನಗೆ ಗೊತ್ತು. ದಿನಾಂಕ 17-12-2020 ರಂದು ಸುಮಾರು ಬೆಳಗ್ಗೆ 11-30 ಕ್ಕೆ ಇಲಾಖೆಯ ಆದೇಶದ ಮೇರೆಗೆ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಿ ಎಂದು ಹೇಳಲು ಟೆಲ್ಲಿಸ್ ನಗರದಲ್ಲಿರುವ 2 ನೇ ಆರೋಪಿಯ ಮನೆಗೆ ಹೋಗಿರುತ್ತೇವೆ. ಆಗ ರೂ.1,760/- ಬಾಕಿ ಇದ್ದು, ಅದನ್ನು ಅವರು ಮೆಸ್ಕಾಂಗೆ ಪಾವತಿ ಮಾಡಿ ಎಂದು 2 ನೇ ಆರೋಪಿಗೆ ತಿಳಿಸಿರುತ್ತೇವೆ. ಆಗ ಸದರಿ ಮನೆಯಲ್ಲಿ 1 ನೇ ಆರೋಪಿ ಇದ್ದು, ಅವಾಚ್ಯ ಶಬ್ದಗಳಿಂದ ನನಗೆ ಬೈದಿರುತ್ತಾರೆ. ಅಲ್ಲದೇ ಡಿಸ್ ಕನೆಕ್ಟ್ ಮಾಡಲು ಬಿಟ್ಟಿರುವುದಿಲ್ಲ. ನಂತರ ನಾನು ಸದರಿ ಸಂಗತಿಯನ್ನು ಸೆಕ್ಷನ್ ಆಫೀಸರ್ ಗೆ ತಿಳಿಸಿರುತ್ತೇವೆ. ಆಗ ಅವರು ಕಂಬದಲ್ಲಿ ಡಿಸ್ ಕನೆಕ್ಟ್ ಮಾಡಲು ತಿಳಿಸಿರುತ್ತಾರೆ. ಆಗ ನಾವು ಕಂಬದ ಹತ್ತಿರ ಬಂದಾಗ 1 ನೇ ಆರೋಪಿ ನಮಗೆ ತಡೆ ಒಡ್ಡಿರುತ್ತಾರೆ. ನಂತರ ನಮ್ಮ ಮತ್ತು 1 ನೇ ಆರೋಪಿ ನಡುವೆ ಮಾತುಕತೆ ಆಗಿ 1 ನೇ ಆರೋಪಿ ಚಾಸಾ-1 ರವರ ಕಾಲರ್ ಪಟ್ಟಿಯನ್ನು ಹಿಡಿದು ಎಳೆದಿರುತ್ತಾರೆ. ನಂತರ ನಾವು ಬೈಕ್‌ನ ಹತ್ತಿರ ಬಂದಾಗ ಬೈಕ್‌ನ ಕೀಯನ್ನು

ತೆಗೆದಾಗ ಬೈಕ್ ಬಿದ್ದು ಹೋಗಿರುತ್ತದೆ. ನಂತರ ಎಂ.ಒ-2 ನ್ನು ಹರಿದು ಹಾಕಿರುತ್ತಾರೆ. ಆ ನಂತರ ನಾವು ಠಾಣೆಗೆ ಬಂದು ದೂರನ್ನು ಕೋಟ್ಟಿರುತ್ತೇವೆ. ಆರೋಪಿತರ ಕೃತ್ಯದಿಂದಾಗಿ ನಮ್ಮ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ. ನಂತರ ಪೋಲಿಸರು ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅದೇ ದಿನ ಮದ್ಯಾಹ್ನ 2-30 ಗಂಟೆಯಿಂದ 3-30 ಗಂಟೆಯ ಸಮಯದಲ್ಲಿ ಟೆಲ್ಲಿಸ್ ನಗರದಲ್ಲಿ 2 ನೇ ಆರೋಪಿಯ ಮನೆಯಲ್ಲಿ ಸ್ಥಳ ಮಹಜರನ್ನು ನಾನು ತೋರಿಸಿಕೊಟ್ಟ ಮೇರೆಗೆ ಚಾಸಾ-9 ಮತ್ತು 10 ರವರ ಸಮಕ್ಷಮ ಮಾಡಿರುತ್ತಾರೆ. ಸದರಿ ಮಹಜರನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಎಂದು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಪಾಟೀಸವಾಲುಃ ಶ್ರೀ. ಎಸ್.ಎಸ್.ಡಿ ವಕೀಲರಿಂದ ಃ-**

ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡುವಾಗ ಸಮಯ 01 ರಿಂದ 1-30 ಆಗಿರಬಹುದು. (ಪ್ರಕರಣದ ದಿನಾಂಕ ಮತ್ತು ಸಮಯವನ್ನು ಹಾಗೂ ಮಹಜರನ ಸಮಯವನ್ನು ಸಾಕ್ಷಿಯು ನ್ಯಾಯಾಲಯಕ್ಕೆ ತಮ್ಮ ಕೈಯಲ್ಲಿ ಬರೆದುಕೊಂಡು ಬಂದಿರುತ್ತಾರೆ.) (ನಮ್ಮ ಬಳಿ ಮಹಜರಿನ ಪ್ರತಿ, ದೂರಿನ ಪ್ರತಿ ಹಾಗೂ ಹೇಳಿಕೆಯ ಪ್ರತಿ ಇದೆ). ಎಂ.ಒ-2 ನನ್ನ ಬಳಿ ಇದ್ದು, ಅದನ್ನು 1 ನೇ ಆರೋಪಿ ತೆಗೆದು ಹರಿದಿರುತ್ತಾರೆ. ಚಾಸಾ-1 ರವರ ಕಾಲರ್ ಪಟ್ಟಿಯನ್ನು 1 ನೇ ಆರೋಪಿ ಹರಿದಿರುತ್ತಾರೆ. ನನಗೆ ಆರೋಪಿತರು ಯಾವುದೇ ಹಲ್ಲೆಯನ್ನು ಮಾಡಿರುವುದಿಲ್ಲ, ಆದರೆ

ಬೈದಿರುತ್ತಾರೆ. ಪೊಲೀಸ್ ಠಾಣೆಗೆ ನಮ್ಮ ಸೆಕ್ಷನ್ ಆಫೀಸರ್ ಕೂಡ ಬಂದಿದ್ದರು. ನಾನು ಪೋಲಿಸ್ ಠಾಣೆಗೆ ಹೋದ ನಂತರ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಗೆ ಸೆಕ್ಷನ್ ಆಫೀಸರ್ ಬಂದಿರುವುದಿಲ್ಲ, ಆದರೆ ಪೊಲೀಸರು ಬಂದಿದ್ದರು. ಪೊಲೀಸ್ ಠಾಣೆಯಲ್ಲಿ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಘಟನಾ ಸಮಯದಲ್ಲಿ 2-30 ರಿಂದ 3-00 ಗಂಟೆಯಲ್ಲಿ ವಿಚಾರಣೆ ಮಾಡಿರುತ್ತಾರೆ. ಅದನ್ನು ಅವರು ಕೈಯಲ್ಲಿ ಬರೆದುಕೊಂಡು ಹೋಗಿರುತ್ತಾರೆ. ನಾನು ಪೊಲೀಸರಿಗೆ ಸ್ಥಳದಲ್ಲಿ ಮಾತ್ರ ಹೇಳಿಕೆಯನ್ನು ಕೊಟ್ಟಿರುತ್ತೇನೆ ಬೇರೆ ಎಲ್ಲಿಯೂ ಹೇಳಿಕೆಯನ್ನು ನೀಡಿರುವುದಿಲ್ಲ.

2. ನನ್ನ ಮತ್ತು ಚಾಸಾ-1 ರವರು ವಿರುದ್ದ ಮೆಸ್ಕಾಂ ಗೆ ದೂರನ್ನು ದಾಖಲು ಮಾಡಿದ್ದು, ಅದರ ಬಗ್ಗೆ ವಿಚಾರಣೆ ಆಗಿರುತ್ತದೆ. ಆ ದ್ವೇಷದಿಂದ ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣದಲ್ಲಿರುವ ದಾಖಲೆಗಳನ್ನು ಓದಿ ಆ ಪ್ರಕಾರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಗೆ ಮದ್ಯಾಹ್ನ 1 ಗಂಟೆ ಸಮಯದಲ್ಲಿ ದೂರು ನೀಡಲು ಹೋದಾಗ ಎಂ.ಒ-1 ಮತ್ತು 2 ಹಾಗೂ ಬೈಕ್‌ನ್ನು ಸ್ವಾಧೀನಪಡಿಸಿರುತ್ತಾರೆ. ಘಟನಾ ಸ್ಥಳಕ್ಕೆ ಹೋಗಲೇ ಇಲ್ಲ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ